ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ , ಮಲ್ಲತ್ತಹಳ್ಳಿ, ಬೆಂಗಳೂರು-560056 ದೂ: 080-23183311/ 23183312

---

ಕುಭಾಪ್ರಾ/19/ಕುವೆಂಪು ಫೆಲೋಷಿಪ್/2022-23 ದಿನಾಂಕ:05.05.2022

## ಪ್ರಕಟಣೆ

**ಕುವೆಂಪು ಫೆಲೋಷಿಪ್ (ಹಿರಿಯ)**

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ನೀಡಲಾಗುವ ಹಿರಿಯ ಫೆಲೋಶಿಪ್ ಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಕುವೆಂಪು ಫೆಲೋಶಿಪ್ (ಹಿರಿಯ) : ನಿಯಮಗಳು**

1. ಕುವೆಂಪು ಅವರ ಸಾಹಿತ್ಯ, ಕುವೆಂಪು ಅವರ ವಿಚಾರಗಳು ಅಥವಾ ಚಿಂತನೆಗಳಿಗೆ ಸಂಬಂಧಿಸಿದ ಸಂಶೋಧನಾ ಯೋಜನೆಗಳು, ಕುವೆಂಪು ಸಾಹಿತ್ಯದ ಅನುವಾದ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ ಕನಿಷ್ಟ 5 ಪುಟಗಳ ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಅಗತ್ಯ ದಾಖಲೆಗಳು ಹಾಗೂ ಅರ್ಜಿಯೊಂದಿಗೆ (ಹಾರ್ಡ್ ಕಾಪಿ) ನಿಗದಿತ ಕೊನೆಯ ದಿನಾಂಕದ ಒಳಗೆ ಪ್ರಾಧಿಕಾರಕ್ಕೆ ತಲುಪಿಸಬೇಕು.
2. ಪ್ರಸ್ತಾವನೆ ಹಾಗೂ ಅರ್ಜಿಯನ್ನು ಕಳುಹಿಸಬೇಕಾದ ವಿಳಾಸ: ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು-560056. ದೂ:080-23183311 / 12
3. ಅರ್ಜಿ ನಮೂನೆಯನ್ನು ಪ್ರಾಧಿಕಾರದ ಜಾಲತಾಣದಿಂದ ಪಡೆದುಕೊಳ್ಳಬಹುದು.
4. ಸರಕಾರಿ ಅಥವಾ ಸರಕಾರಿ ಅನುದಾನ ಪಡೆಯುವ ಸಂಸ್ಥೆಗಳಲ್ಲಿ ಖಾಯಂ ಉದ್ಯೋಗಿಗಳಾಗಿರುವವರು ಅಥವಾ ಸಂಶೋಧನೆ ಇತ್ಯಾದಿ ಕಾರ್ಯಗಳಿಗಾಗಿ ಶಿಷ್ಯವೇತನ ಪಡೆಯುತ್ತಿದ್ದವರು ಸಂಬಂಧಪಟ್ಟ ಮೇಲಧಿಕಾರಿಗಳಿಂದ ನಿರಾಕ್ಷೇಪಣಾಪತ್ರವನ್ನು ಪಡೆದು ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.
5. ಹಿರಿಯ ಫೆಲೋಶಿಪ್ಪಿಗೆ ಅರ್ಜಿದಾರರ ವಯಸ್ಸು ಕನಿಷ್ಠ 35 ವರ್ಷ ಪೂರ್ಣವಾಗಿರಬೇಕು. (ಎಸ್. ಎಸ್. ಎಲ್. ಸಿ. ಪ್ರಮಾಣಪತ್ರದ ಪ್ರತಿ ಲಗತ್ತಿಸುವುದು)
6. ಫೆಲೋಶಿಪ್ಪಿನ ಯೋಜನೆಯಲ್ಲಿ ಕೈಗೊಳ್ಳುವ ಕೆಲಸಕ್ಕಾಗಿ ಬೇರೆ ಇಲಾಖೆ/ವಿಶ್ವವಿದ್ಯಾನಿಲಯಗಳಿಂದ ಅನುದಾನ ಪಡೆದಿರಬಾರದು.
7. ಪ್ರಾಧಿಕಾರವು ನಿಗದಿಪಡಿಸುವ ದಿನಾಂಕದ ಒಳಗೆ ಯೋಜನೆಯನ್ನು ಪೂರೈಸಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಪ್ರಾಧಿಕಾರವು ಸೂಚಿಸಿದ ಎರಡು ಕಡೆಗಳಲ್ಲಿ ಉಪನ್ಯಾಸ ನೀಡಬೇಕು.
8. ಹಕ್ಕುಸ್ವಾಮ್ಯಕ್ಕೆ ಒಳಪಟ್ಟ ಸಂದರ್ಭದಲ್ಲಿ ಅನುವಾದ ಮಾಡಲು ಹಾಗೂ ಅದನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಪ್ರಕಟಿಸಲು ಮೂಲಲೇಖಕರ ಅನುಮತಿಯ ಅಗತ್ಯವಿರುತ್ತದೆ. ಅಂಥ ಅನುಮತಿಯನ್ನು ಪಡೆಯಲು ಪ್ರಾಧಿಕಾರವು ಯತ್ನಿಸಬಹುದಾದರೂ ಅನುಮತಿ ದೊರೆಯದೆ ಇದ್ದರೆ ಪ್ರಾಧಿಕಾರವು ಹೊಣೆಯಾಗುವುದಿಲ್ಲ ಮತ್ತು ಅನುಮತಿ ದೊರೆಯದ ಸಂದರ್ಭಗಳಲ್ಲಿ ಫೆಲೋಶಿಪ್ ರದ್ದುಗೊಳ್ಳುತ್ತದೆ.

9. ಮೂರು ತಿಂಗಳಿಗೊಮ್ಮೆ ಯೋಜನೆಯ ಪ್ರಗತಿವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಯೋಜನೆಯನ್ನು ವಹಿಸಿದ ಮೂರು ತಿಂಗಳ ಒಳಗೆ ತೃಪ್ತಿಕರ ಪ್ರಗತಿಯನ್ನು ತೋರಿಸದಿದ್ದರೆ ಫೆಲೋಶಿಪ್ಪನ್ನು ರದ್ದುಪಡಿಸಲಾಗುವುದು.

10. ಅನುವಾದದ ಯೋಜನೆಯಾದರೆ ಸ್ವತಂತ್ರವಾಗಿ ಮಾಡಿದ ಅನುವಾದವಾಗಿರತಕ್ಕದ್ದು. ಸಂಶೋಧನಾ ಯೋಜನೆಯಾದರೆ ಸ್ವತಂತ್ರ ಸಂಶೋಧನೆಯಾಗಿರಬೇಕು.

11. ಯೋಜನೆಯನ್ನು ಪೂರೈಸಿ ಅನುವಾದದ/ಯೋಜನಾ ವರದಿ/ಮಹಾಪ್ರಬಂಧದ ಪಠ್ಯವನ್ನು ನುಡಿ ಏಕಭಾಷೆ ತಂತ್ರಾಂಶದಲ್ಲಿ ಟೈಪ್ ಮಾಡಿ ನಿಗದಿತ ಅವಧಿಯೊಳಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು.

12. ಅಭ್ಯರ್ಥಿಗಳು ಯೋಜನೆಯನ್ನು ಪೂರ್ಣಗೊಳಿಸಿ ಸಲ್ಲಿಸಿದ ಪಠ್ಯವನ್ನು ಮೌಲ್ಯಮಾಪನ ಸಮಿತಿ/ತಜ್ಞರು ಪರಿಶೀಲಿಸಿ ಶಿಫಾರಸು ಮಾಡಿದ ಬಳಿಕ ಫೆಲೋಶಿಪ್ ಮೊತ್ತವನ್ನು ಪಾವತಿಸಲಾಗುವುದು. ಯೋಜನೆಯನ್ನು ತೃಪ್ತಿಕರವಾಗಿ ಪೂರೈಸದಿದ್ದರೆ ಯಾವುದೇ ಮೊತ್ತವನ್ನು ಪಾವತಿಸಲಾಗುವುದಿಲ್ಲ.

13. ಯೋಜನೆಯ ಮಧ್ಯದಲ್ಲಿ ಯಾವುದೇ ಮೊತ್ತವನ್ನು ಪಾವತಿಸಲಾಗುವುದಿಲ್ಲ.

14. ಯೋಜನೆಯ ಅಂಗವಾಗಿ ಸಲ್ಲಿಸಿದ ಪಠ್ಯದ ಹಕ್ಕುಗಳು ಪ್ರಾಧಿಕಾರದ್ದಾಗಿರುತ್ತವೆ. ಅವುಗಳನ್ನು ಪ್ರಕಟಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ. ಪ್ರಕಟಣೆಗಾಗಿ ಯಾವುದೇ ಪ್ರತ್ಯೇಕ ರಾಯಧನ ಅಥವಾ ಸಂಭಾವನೆಯನ್ನು ಪಾವತಿಸಲಾಗುವುದಿಲ್ಲ.

15. ಮೊದಲ ಹಂತದಲ್ಲಿ ಪ್ರಸ್ತಾವನೆಗಳನ್ನು ಪರಿಶೀಲನೆ ನಡೆಸಿ ಆಯ್ಕೆಯಾದವರನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದ ಬಳಿಕ ಅಂತಿಮ ಆಯ್ಕೆಯನ್ನು ಮಾಡಲಾಗುವುದು. ಅಭ್ಯರ್ಥಿಗಳು ಸ್ವಂತ ವೆಚ್ಚದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕಾಗುತ್ತದೆ.

**16. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:06.06.2022 ಸಂಜೆ 5.30** ಗಂಟೆ

17. ಅಪೂರ್ಣ ಅರ್ಜಿ ಹಾಗು ಕೊನೆಯ ದಿನಾಂಕದ ನಂತರ ಸಲ್ಲಿಕೆಯಾಗುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು

ಇತ್ತೀಚಿನ ಭಾವಚಿತ್ರ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ, ಬೆಂಗಳೂರು-560056

ದೂ:080-23183312/23183311 (ಟೆಲಿಫ್ಯಾಕ್ಸ್) Email:kbbp-bengaluru@ka.gov.in

## ಕುವೆಂಪು ಫೆಲೋಷಿಪ್ ಅರ್ಜಿ (ಹಿರಿಯ)

1. ಹೆಸರು :

2. ವಿಳಾಸ :

3. ಜನ್ಮ ದಿನಾಂಕ :

4. ವಯಸ್ಸು

5. ಜಾತಿ :

6. ವಿದ್ಯಾರ್ಹತೆ :

7. ವೃತ್ತಿ ವಿವರಗಳು :

8. ಅಧ್ಯಯನ ಶೀರ್ಷಿಕೆ :

9. ಇದುವರೆಗಿನ ಪ್ರಕಟಣೆ :
(ಅಗತ್ಯವಿದ್ದಲ್ಲಿ ಪ್ರತ್ಯೇಕ ಹಾಳೆ ಲಗತ್ತಿಸುವುದು)

10. ಅಗತ್ಯವಿದ್ದಡೆ ನಿರಪೇಕ್ಷಣಾ ಪತ್ರವನ್ನು ಸಲ್ಲಿಸಲಾಗಿದೆಯೇ :

ದೂರವಾಣಿ ಸಂಖ್ಯೆ :

11. ಇ-ಮೇಲ್ ವಿಳಾಸ :

ಮೇಲೆ ನೀಡಲಾದ ಎಲ್ಲಾ ಮಾಹಿತಿಗಳು ಸರಿಯಾಗಿದ್ದು, ಮಾಹಿತಿ ಹಾಗೂ ಸಲ್ಲಿಸಲಾಗುವ ಯಾವದೇ ದಾಖಲೆಗಳು ಸುಳ್ಳು ಎಂದು ಕಂಡಬಂದಲ್ಲಿ ಹಾಗೂ ಪ್ರಾಧಿಕಾರವು ವಿಧಿಸುವ ಷರತ್ತುಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸದೇ ಇದ್ದಲ್ಲಿ ಯಾವದೇ ಸಂದರ್ಭದಲ್ಲಿ ನನ್ನ ಅರ್ಜಿಯನ್ನು ಪ್ರಾಧಿಕಾರವು ತಿರಸ್ಕರಿಸಿ ಕಾನೂನು ರೀತ್ಯ ಕ್ರಮಕೈಗೊಳ್ಳಬಹುದಾಗಿದೆ.

**ಸ್ಥಳ:** **ಸಹಿ:**

**ದಿನಾಂಕ:** **ಹೆಸರು:**

**ಸೂಚನೆಗಳು:**

1. ಅರ್ಜಿಯೊಂದಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸಕೂಡದು.
2. ಕುವೆಂಪು ಅವರ ಸಾಹಿತ್ಯ, ಕುವೆಂಪು ಅವರ ವಿಚಾರಗಳು ಅಥವಾ ಚಿಂತನೆಗಳಿಗೆ ಸಂಬಂಧಿಸಿದ ಸಂಶೋಧನಾ ಯೋಜನೆಗಳು, ಕುವೆಂಪು ಸಾಹಿತ್ಯದ ಅನುವಾದ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ *ಕನಿಷ್ಠ 5 ಪುಟಗಳ* ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವುದು.
3. ಅರ್ಜಿದಾರರ ವಯೋಮಿತಿ: 36 ರಿಂದ ಮೇಲ್ಪಟ್ಟು
4. ಪ್ರಾಧಿಕಾರದಿಂದ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದಲ್ಲಿ ಕೆಳಕಂಡ ಮೂಲ ದಾಖಲೆಗಳು ಹಾಗು ಧೃಢೀಕೃತ ನಕಲು ಪ್ರತಿಯೊಂದಿಗೆ ಹಾಜರಾಗತಕ್ಕದ್ದು.
    1. ವಯಸ್ಸಿನ ದೃಡೀಕರಣ ದಾಖಲೆ (SSLC ಪ್ರಮಾಣಪತ್ರ)
    2. ಶೈಕ್ಷಣಿಕ ದಾಖಲೆಗಳು
    3. ಜಾತಿ ಪ್ರಮಾಣಪತ್ರ (ಪರಿಶಿಷ್ಠ ಜಾತಿ / ಪಂಗಡಕ್ಕೆ ಸೇರಿದ್ದಲ್ಲಿ)
    4. ಸಲ್ಲಿಸಲು ಉದ್ದೇಶಿಸಿರುವ ಅಧ್ಯಯನ ವಿಷಯದಲ್ಲಿ ಬೇರೆ ಇಲಾಖೆ/ ವಿಶ್ವವಿದ್ಯಾಲಯಗಳಿಂದ ಅನುದಾನ ಪಡೆದಿಲ್ಲ ಎಂಬ ಬಗ್ಗೆ ನೋಟರಿ ಪ್ರಮಾಣಪತ್ರ.
    5. ಖಾಯಂ ವೃತ್ತಿಯಲ್ಲಿದ್ದರೆ ಅಥವಾ ಶಿಷ್ಯವೇತನ ಪಡೆಯುತ್ತಿದ್ದರೆ ಈ ಫೆಲೋಷಿಪ್ ಪಡೆಯಲು ಯಾವ ಆಕ್ಷೇಪಣೆಯೂ ಇಲ್ಲವೆಂದು ದೃಢೀಕರಿಸುವ ಪತ್ರವನ್ನು ಸಂಸ್ಥೆಯ ಮುಖ್ಯಸ್ಥರು / ಮಾರ್ಗದರ್ಶಕರಿಂದ ಪಡೆದು ಸಲ್ಲಿಸಬೇಕು.
5. ಅರ್ಜಿಯನ್ನು ಭರ್ತಿಮಾಡಿ ಸಹಿಯೊಂದಿಗೆ ಮೇಲ್ಕಂಡ ಪ್ರಾಧಿಕಾರದ ವಿಳಾಸಕ್ಕೆ ದಿನಾಂಕ:06.06.2022 ರ ಸಂಜೆ 5.30 ಗಂಟೆಯ ಒಳಗಾಗಿ ಸಲ್ಲಿಸುವುದು. ಅಪೂರ್ಣ ಅರ್ಜಿ ಹಾಗು ಕೊನೆಯ ದಿನಾಂಕದ ನಂತರ ಸಲ್ಲಿಕೆಯಾಗುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.